# ಹೊಸತು



## ವಿಟ್ರಾ ಒಳಾಂಗಣ ಉತ್ಪನ್ನ

ಮನೆಯ ಒಳಾಂಗಣಕ್ಕೆ ಬೇಕಾದ ಟೈಲ್ಸ್, ಬಾತ್‌ರೂಮ್ ಪರಿಕರಗಳಿಗೆ ಹೆಸರಾದ ವಿಟ್ರಾ ಇದೀಗ ವಿನೂತನ ಡಿಸೈನ್‌ನ ಹಲವು ಉತ್ಪನ್ನಗಳನ್ನು ಮಾರುಕಟ್ಟೆಗೆ ತಂದಿದೆ.

ಪೀಠೋಪಕರಣಗಳು, ಆಕರ್ಷಕ ವಿನ್ಯಾಸ ಮತ್ತು ಬಣ್ಣ ವೈವಿಧ್ಯದ ನೆಲಹಾಸು, ಬಾತ್‌ರೂಮ್‌ಗೆ ಬೇಕಾದ ವಾಷ್ ಬೇಸಿನ್, ಕಮೋಡ್, ಕನ್ನಡಿ, ಶವರ್ ಮುಂತಾದ ಉತ್ಪನ್ನಗಳು ಇದರಲ್ಲಿ ಸೇರಿವೆ. ಇವೆಲ್ಲವೂ ಮನೆಯ ಒಳಾಂಗಣ ವಿನ್ಯಾಸ ಮತ್ತು ಅಂದವನ್ನು ಹೆಚ್ಚಿಸಲಿವೆ ಎಂಬುದು ಕಂಪೆನಿ ಹೇಳಿಕೆ.

ಬೆಲೆ, ಲಭ್ಯತೆ ಮತ್ತಿತರ ಮಾಹಿತಿಗಳಿಗೆ: 9819977344

## ಇಕೊ ಡ್ರೈವ್ ಕ್ರೋನೊಗ್ರಾಫ್ ವಾಚ್

ವಾಚ್ ತಯಾರಿಕೆಯಲ್ಲಿ ಹೆಸರಾಗಿರುವ ಸಿಟಿಜನ್ಸ್, ಕಂಪೆನಿ ಇದೀಗ ಹೊಸ ಮಾದರಿಯ ಇಕೊ ಡ್ರೈವ್ ಕ್ರೋನೊಗ್ರಾಫ್ ವಾಚ್ ಅನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಿದೆ. ದೀರ್ಘ ಬಾಳಿಕೆ, ಉತ್ತಮ ಕಾರ್ಯಕ್ಷಮತೆಗೆ ಈ ವಾಚ್ ಹೆಸರಾಗಿದೆ ಎಂಬುದು ಕಂಪೆನಿ ಹೇಳಿಕೆ. ಇದು 1/1000 ಸೆಕೆಂಡ್‌ಗಳವರೆಗಿನ ಸೂಕ್ಷ್ಮ ಅವಧಿಯನ್ನೂ ಅತ್ಯಂತ ನಿಖರವಾಗಿ ಡಿಜಿಟಲ್ ಡಿಸ್‌ಪ್ಲೇನಲ್ಲಿ ಪ್ರದರ್ಶಿಸುತ್ತದೆ.




ನೂತನ ಸಿಟಿಜೆನ್ ಎಕೊಡ್ರೈವ್ ರೇಸಿಂಗ್ ಕ್ರೋನೊಗ್ರಾಫ್ ಮಾದರಿ ಅನಲಾಗ್ ಮತ್ತು ಡಿಜಿಟಲ್ ಡಿಸ್‌ಪ್ಲೇಗಳಿಂದ ಕೂಡಿದೆ.

ಬೆಲೆ 46,000 ರೂಪಾಯಿ. ಮಾಹಿತಿಗೆ: 93424 83454

## ಡಿ ವಾನೊ ಶೂ

ಇಟಲಿ ವಿನ್ಯಾಸ ಕೌಶಲ್ಯದಿಂದ ಪ್ರೇರೇಪಿತವಾದ ಹೊಸ ಶೂ ಮಾರುಕಟ್ಟೆಗೆ ಬಂದಿದೆ. ಡಿ ವಾನೊ ಶೂ ಫ್ಯಾಷನ್ ಬಯಸುವ ಪುರುಷರಿಗಾಗಿ ಇದೀಗ ಸ್ಟೈಲಿಷ್, ಹಗುರ ಹಾಗೂ ಆರಾಮದಾಯಕ ಆಗಿರುವ ಹೊಸ ಶೂ ಅನ್ನು ತಂದಿದ್ದು, ಪುರುಷರಲ್ಲಿ ಆತ್ಮವಿಶ್ವಾಸ ಹೆಚ್ಚಿಸಲು ನೆರವಾಗಲಿದೆ ಎಂಬುದು ಕಂಪೆನಿ ವಿವರಣೆ. ಈ ಶೂ ಅನ್ನು ಆನ್‌ಲೈನ್‌ನಲ್ಲಿ ಖರೀದಿಸಬೇಕು. ಪ್ರಮುಖ ಮಳಿಗೆಗಳಲ್ಲೂ ಸಿಗುತ್ತದೆ. ಮಾಹಿತಿಗೆ: 9916748859



## ಫಿಕಾಂ ಸ್ಮಾರ್ಟ್‌ಫೋನ್

ಚೀನಾ ಮೂಲದ ಫಿಕಾಂ ಕಂಪೆನಿ ಇದೀಗ ತನ್ನ ಸ್ಮಾರ್ಟ್‌ಫೋನ್ ಸರಣಿಯಲ್ಲಿ ಎಲ್‌ಟಿಇ ಆ್ಯಂಡ್ರಾಯ್ಡ್ ಸ್ಮಾರ್ಟ್‌ಫೋನ್ ಫಿಕಾಂ ಫ್ಯಾಷನ್ 660 ಅನ್ನು ಬಿಡುಗಡೆ ಮಾಡಿದೆ.

ಎಲ್‌ಇಡಿ ಫ್ಲ್ಯಾಷ್‌ನೊಂದಿಗೆ 13 ಮೆಗಾಪಿಕ್ಸೆಲ್ ಹಿಂಬದಿ ಕ್ಯಾಮೆರಾ ಹಾಗೂ ಮುಂಬದಿಯಲ್ಲಿ 5 ಮೆಗಾಪಿಕ್ಸೆಲ್ ಕ್ಯಾಮೆರಾ ಹೊಂದಿದೆ. ಗ್ಲೋಬಲ್ 4ಜಿ ರೋಮಿಂಗ್ ಬೆಂಬಲ ಹಾಗೂ ವಿಶೇಷ ಶ್ಯಾಡೊಮೀಟರ್‌ಗಳಿಂದ ಕೂಡಿರುವ ಈ ಸ್ಮಾರ್ಟ್‌ಫೋನ್ ಕೇವಲ 7.3 ಎಂಎಂನಷ್ಟು ದಪ್ಪಗಿದೆ. ಅತ್ಯಂತ ತೆಳು, ಹಗುರ ಹಾಗೂ ಸ್ಟೈಲಿಶ್ ಇದರ ವೈಶಿಷ್ಟ್ಯ. ಸುಂದರ ಲೋಹದ ಫ್ರೇಂ ಅನ್ನೂ ಹೊಂದಿದೆ

ಈ ಸಾಧನ ಅಮೆಜಾನ್.ಇನ್‌ನಲ್ಲಿ ಲಭ್ಯವಿದೆ. ಮಾಹಿತಿಗೆ: 9738007723




## ಝಂಡು ಜೆಲ್ ಬಾಮ್

ಇಮಾಮಿ ಝಂಡು ಜೆಲ್‌ಬಾಮ್ ಜೂನಿಯರ್ ಇದೀಗ ಮಕ್ಕಳಿಗಾಗಿಯೇ ತಯಾರಿಸಲಾಗಿದ್ದು ಮಾರುಕಟ್ಟೆಗೆ ಬಿಡುಗಡೆಯಾಗಿದೆ. ಮಕ್ಕಳಿಗೆ ಆಗುವ ನೋವನ್ನು ಅತ್ಯಂತ ಶೀಘ್ರವಾಗಿ ನಿವಾರಿಸಿ ಬಹು ಪ್ರಯೋಜನಕಾರಿಯಾಗಿದೆ ಈ ಬಾಮ್ ಎನ್ನುವುದು ಕಂಪೆನಿ ವಿವರಣೆ.

ಗಿಡಮೂಲಿಕೆಗಳಿಂದ ತಯಾರಿಸಲಾಗಿದ್ದು ಶೀತ, ತಲೆ ನೋವು, ಕಾಲುನೋವು, ಭುಜನೋವುಗಳನ್ನು ನಿವಾರಿಸುತ್ತದೆ. 8 ಎಂಎಲ್ ಪ್ಯಾಕ್‌ಗೆ 30 ರೂಪಾಯಿ. ಮಾಹಿತಿಗೆ: 9836292392

